## ನಾಗರೀಕ ಸನ್ನದು

### ನಮ್ಮ ಸೇವೆ:

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕಾರ ನೋಂದಾಯಿಸಲ್ಪಟ್ಟ ಸಹಕಾರ ಸಂಘಗಳು ಅವುಗಳ ಲೆಕ್ಕಪತ್ರಗಳನ್ನು ಪರಿಶೋಧಿಸಲು ಇಲಾಖೆಯು ನಿರ್ವಹಿಸುವ ಅರ್ಹ ಲೆಕ್ಕಪರಿಶೋಧಕರ ಪಟ್ಟಿಯಿಂದ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಬೇಕಿರುವುದರಿಂದ ಇಲಾಖೆಯು ಅರ್ಹ ಲೆಕ್ಕಪರಿಶೋಧಕರ ಪಟ್ಟಿಯನ್ನು ನಿರ್ವಹಿಸುತ್ತಿದೆ.

ಪ್ರತಿಯೊಂದು ಸಹಕಾರ ಸಂಘವು ಅದರ ಲೆಕ್ಕಗಳನ್ನು ಪ್ರತಿ ವರ್ಷ ಸೆಪ್ಟೆಂಬರ್ 1ನೇ ದಿನಾಂಕದೊಳಗಾಗಿ ಪರಿಶೋಧಿಸಿಕೊಳ್ಳುವುದು ಅವಶ್ಯ.

ಇಲಾಖೆಯು ಲೆಕ್ಕಪರಿಶೋಧನಾ ಸೂಚನೆಗಳು ಹಾಗೂ ಲೆಕ್ಕಪರಿಶೋಧನಾ ಕೈಪಿಡಿಗಳನ್ನು ಹಾಗೂ ಲೆಕ್ಕಪರಿಶೋಧನಾ ವರದಿಯ ನಮೂನೆಗಳನ್ನು ಲೆಕ್ಕಪರಿಶೋಧಕರಿಗೆ ಮಾರ್ಗದರ್ಶನವಾಗಿ ಹಾಗೂ ಲೆಕ್ಕಪರಿಶೋಧನೆಯಲ್ಲಿ ಸಮಾನತೆಯನ್ನು ತರುವ ಸಲುವಾಗಿ ನೀಡಲಾಗಿರುತ್ತದೆ. ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯಲ್ಲಿ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಹಾರಗಳನ್ನು ಪರಿಶೀಲಿಸುವುದಲ್ಲದೆ, ಸಹಕಾರ ಸಂಘಗಳ ಆರ್ಥಿಕ ಸ್ಥಿತಿಗತಿಯ ವಾಸ್ತವ ಹಾಗೂ ನೈಜತೆಯನ್ನು ಪ್ರತಿಬಿಂಬಿಸಬೇಕಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ಕ್ಕೆ ರಾಜ್ಯ ಸರ್ಕಾರವು ಮಾಡಿದ ತಿದ್ದುಪಡಿ ಅನುಸಾರ ಸಹಕಾರ ಸಂಘಗಳು ಅವುಗಳ ಲೆಕ್ಕಪುಸ್ತಕಗಳನ್ನು ಪರಿಶೋಧಿಸಿಕೊಳ್ಳಲು ವಾರ್ಷಿಕ ಮಹಾ ಸಭೆಯಲ್ಲಿ ಲೆಕ್ಕಪರಿಶೋಧಕರನ್ನು ಅಥವಾ ಲೆಕ್ಕಪರಿಶೋಧಕರ ಫರ್ಮ್ ಅನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ, ಇಲಾಖೆಯು ಸಹಕಾರ ಸಂಘಗಳ ಲೆಕ್ಕಪರಿಶೋಧನೆ ನಿರ್ವಹಿಸಲು ಇಚ್ಚಿಸಿದ 1211 ಅರ್ಹ ಸನ್ನದು ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧಕರ ಫರ್ಮ್‌ಗಳನ್ನು, 417 ಇಲಾಖಾ ಲೆಕ್ಕಪರಿಶೋಧಕರೊಂದಿಗೆ ಪಟ್ಟಿ ಮಾಡಿ ಪ್ರಕಟಿಸಲಾಗಿರುತ್ತದೆ.

ಸಹಕಾರ ಸಂಘದಲ್ಲಿ ನಿಧಿಗಳ ವಂಚನೆ ಅಥವಾ ದುರ್ವಿನಿಯೋಗ ಅಥವಾ ದುರುಪಯೋಗ ಆಗಿದೆ ಎಂದು ಮೇಲ್ನೋಟಕ್ಕೆ ಕಂಡು ಬಂದರೆ ಅಥವಾ ಲೆಕ್ಕಪತ್ರಗಳ ತಪ್ಪು ವರ್ಗೀಕರಣ ಮಾಡಿರುವುದು ಕಂಡು ಬಂದರೆ ಇತರೆ ಸಮಂಜಸ ಕಾರಣಗಳಿಗಾಗಿ ಸಂಘದ ಹಣಕಾಸು ಪರಿಸ್ಥಿತಿಯ ಸತ್ಯತೆಯನ್ನು ಪ್ರತಿಬಿಂಬಿಸುವ ದೃಷ್ಟಿಯಿಂದ ಅಂತಹ ಸಹಕಾರ ಸಂಘದ ಮರು ಲೆಕ್ಕಪರಿಶೋಧನೆಗೆ ಸರ್ಕಾರವು ಆದೇಶ ಮಾಡಬಹುದಾಗಿರುತ್ತದೆ.

### ಇಲಾಖೆಯ ಆಡಳಿತ ವ್ಯವಸ್ಥೆ:–

| | |
|---|---|
| 1. ರಾಜ್ಯ ಮಟ್ಟ (ಬೆಂಗಳೂರಿನಲ್ಲಿ) | : ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ |
| 2. ಜಿಲ್ಲಾ ಮಟ್ಟದಲ್ಲಿ (30 ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ) | : ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರ ಕಛೇರಿಗಳು |
| 3. ಉಪ ವಿಭಾಗೀಯ ಮಟ್ಟದಲ್ಲಿ (ಉಪ ವಿಭಾಗೀಯ ಕೇಂದ್ರ ಸ್ಥಾನ ಹೊಂದಿದ 50 ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ) | : ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರ ಕಛೇರಿಗಳು |
| 4. ತಾಲ್ಲೂಕು ಮಟ್ಟದಲ್ಲಿ (ಉಪ ವಿಭಾಗೀಯ ಕೇಂದ್ರ ಸ್ಥಾನ ಹೊರತುಪಡಿಸಿ, ಉಳಿದ 125 ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ) | : ಸಹಕಾರ ಸಂಘಗಳ ಹಿರಿಯ ಲೆಕ್ಕಪರಿಶೋಧಕರ ಕಛೇರಿಗಳು |

**ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 :**

ಸಾರ್ವಜನಿಕರು ಮಾಹಿತಿಯನ್ನು ಮಾಹಿತಿ ಹಕ್ಕು ಅಧಿನಿಯಮ 2005ರಡಿ ಸಕ್ಷಮ ಪ್ರಾಧಿಕಾರದಿಂದ ನಿಗದಿತ ಅರ್ಜಿ ಶುಲ್ಕವನ್ನು ಹಾಗೂ ಮಾಹಿತಿ ಶುಲ್ಕವನ್ನು ಪೋಸ್ಟಲ್ ಆರ್ಡರ್ ಅಥವಾ ಕೋರ್ಟ್ ಫೀ ಸ್ಟ್ಯಾಂಪ್ ಮೂಲಕ ಪಾವತಿಮಾಡಿ ಪಡೆಯಬಹುದಾಗಿದೆ.

**ಸಾರ್ವಜನಿಕ ಕುಂದು ಕೊರತೆ ವಿಭಾಗ:**

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು (ತನಿಖೆ ಮತ್ತು ಪರಿಶೀಲನಾ ಘಟಕ) ಇವರು ಸಾರ್ವಜನಿಕ ಕುಂದು ಕೊರತೆ ಅಧಿಕಾರಿಯಾಗಿರುತ್ತಾರೆ. ಅವರ ಕಛೇರಿ ದೂರವಾಣಿ ಸಂಖ್ಯೆ: 080–6507307 ಎಲ್ಲಾ ದೂರುಗಳನ್ನು ಹಾಗೂ ಸಾರ್ವಜನಿಕ ಕುಂದು ಕೊರತೆಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ನಿರ್ದೇಶಕರು,**
**ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ,**
**ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ,**
**ಬೆಂಗಳೂರು – 560 004.**

**ಫ್ಯಾಕ್ಸ್ ಸಂಖ್ಯೆ : 91–080–26611030**
**ದೂರವಾಣಿ ಸಂಖ್ಯೆ : 26610326, 26507307, 26610372, 26610610**

**ಇ–ಮೇಲ್ ವಿಳಾಸ: dca-ka@nic.in**